

ಮಂಜಿನ ಆಲಿಂಗನದಲ್ಲಿ ಶಾಲಿಮಾರ್ ಬಾಗ್

# ಮನಮೋಹಕ ಮೊಘಲ್ ಉದ್ಯಾನ

# ಶಾಲಿಮಾರ್ ಬಾಗ್

ಬಿ.ಎಸ್. ರಾಜಲಕ್ಷ್ಮಿ

ಜಮ್ಮು ಕಾಶ್ಮೀರ ರಾಜ್ಯದ ರಾಜಧಾನಿ ಶ್ರೀನಗರ ಸಮುದ್ರ ಮಟ್ಟದಿಂದ ಸುಮಾರು 5700 ಅಡಿ ಎತ್ತರದಲ್ಲಿರುವ ವಿಶ್ವಪ್ರಸಿದ್ಧ ಗಿರಿಧಾಮ. ಹಿಮಾಲಯದ ತಪ್ಪಲಲ್ಲಿರುವ ಈ ನಗರವು ದೇಶ ವಿದೇಶಗಳ ಪ್ರವಾಸಿಗರನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಅನೇಕ ಸರೋವರಗಳು ಹಾಗೂ ಮನಮೋಹಕ ಉದ್ಯಾನವನಗಳಿಂದ ಕಂಗೊಳಿಸುವ ಶ್ರೀನಗರವು ಸೌಂದರ್ಯದ ಖನಿ.

ಶ್ರೀನಗರದಲ್ಲಿರುವ ಮೊಗಲ್ ಉದ್ಯಾನವನಗಳ ಪೈಕಿ 'ಶಾಲಿಮಾರ್ ಬಾಗ್' ವಿಸ್ತಾರದಲ್ಲಿ ಎರಡನೆಯ ಸ್ಥಾನವನ್ನು ಹೊಂದಿದ್ದರೂ (ಮೊದಲನೆಯದು ನಿಷಾದ್ ಬಾಗ್), ಅತಿ ಹೆಚ್ಚಿನ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ. ಶ್ರೀನಗರದ ಹೊರವಲಯದಲ್ಲಿ, ಸುಪ್ರಸಿದ್ಧ ದಾಲ್ ಸರೋವರದ ಬಲದಂಡೆಯ ಈಶಾನ್ಯ ದಿಕ್ಕಿನಲ್ಲಿರುವ ಶಾಲಿಮಾರ್ ಬಾಗ್ ಉತ್ತಮವಾಗಿ ನಿರ್ವಹಿಸಲಾಗಿರುವ ಸುಂದರ ಉದ್ಯಾನವನ.

ಆರನೇ ಶತಮಾನದಷ್ಟು ಹಿಂದೆಯೇ ಎರಡನೆಯ ಪ್ರವರಸೇನ ಈ ಸ್ಥಳದಲ್ಲಿ ಉದ್ಯಾನವೊಂದನ್ನು ನಿರ್ಮಿಸಿದ್ದನೆನ್ನಲಾಗಿದೆ. ಆಗ ಅದು ಪವಿತ್ರ ಸ್ಥಾನವೆಂದು ಪರಿಗಣಿತವಾಗಿತ್ತು. ಈ ಸ್ಥಳದ ಸೌಂದರ್ಯಕ್ಕೆ ಮಾರುಹೋದ ತನ್ನ ಪತ್ನಿ ನೂರ್‌ಜಹಾನಳಿಗಾಗಿ ಮೊಗಲ್ ದೊರೆ ಜಹಾಂಗೀರ್ 'ಫರ್ಹಾ ಭಕ್ಷ್', 'ಫೈಝ್ ಭಕ್ಷ್' ಎಂದೂ ಕರೆಯಲಾಗುವ ಉದ್ಯಾನವನವನ್ನು 1619ರಲ್ಲಿ ನಿರ್ಮಿಸಿದನು. ನಂತರ ಅವನ ಮಗ ಶಾಹ್‌ಜಹಾನ್ 'ಶಾಲಿಮಾರ್ ಬಾಗ್' ಎಂದು ಜನಪ್ರಿಯವಾದ ಈ ಉದ್ಯಾನವನ್ನು ವಿವಿಧ ಹಂತಗಳಲ್ಲಿ ಅಭಿವೃದ್ಧಿಪಡಿಸಿದನು. 1630ರ ವೇಳೆಗೆ ಈ ಕಾರ್ಯ ಪೂರ್ಣಗೊಂಡಿತು. ಆಗ ಈ ಕೆಲಸದ ಉಸ್ತುವಾರಿ ವಹಿಸಿದ್ದವನು ಕಾಶ್ಮೀರದ ಆಡಳಿತಾಧಿಕಾರಿಯಾಗಿದ್ದ ಝಫರ್ ಖಾನ್. ಜಹಾಂಗೀರ್ ಮತ್ತು ಆತನ ಪತ್ನಿ ನೂರ್‌ಜಹಾನ್ ಬೇಸಗೆಯ ಕಾಲದಲ್ಲಿ ತಮ್ಮ ಪರಿವಾರ ಮತ್ತು ಆಡಳಿತಗಾರರ ಜೊತೆಗೂಡಿ ಶ್ರೀನಗರಕ್ಕೆ ಬರುತ್ತಿದ್ದರಂತೆ. ಆಗ ಆಡಳಿತದ ಕೆಲಸಕಾರ್ಯಗಳು ದಿಲ್ಲಿಯ ಬದಲು ಇಲ್ಲಿಂದಲೇ ನಡೆಯುತ್ತಿದ್ದವು. ಮಹಾರಾಜಾ ರಂಜಿತ್‌ಸಿಂಗ್ ಅವಧಿಯಲ್ಲಿ ಯೂರೋಪಿಯನ್ ಅತಿಥಿಗಳಿಗಾಗಿ ಅಮೃತಶಿಲೆಯಲ್ಲಿ ನಿರ್ಮಿಸಲಾಗಿದ್ದ ಅತಿಥಿಗೃಹವನ್ನು ಬಳಸಲಾಗುತ್ತಿತ್ತು. ಮಹಾರಾಜಾ ಹರಿಸಿಂಗನ ಆಡಳಿತ ಕಾಲದಲ್ಲಿ ಈ ಉದ್ಯಾನದ ವಿದ್ಯುದ್ದೀಕರಣವು ನಡೆಯಿತು.

ಪರ್ಷಿಯನ್ ಉದ್ಯಾನ 'ಚಾಹರ್ ಬಾಗ್'ನ ವಿನ್ಯಾಸವನ್ನು ಹೊಂದಿರುವ ಶಾಲಿಮಾರ್ ಬಾಗ್ 587 ಮೀಟರ್ ಉದ್ದ ಹಾಗೂ 251 ಮೀಟರ್ ಅಗಲವಿದ್ದು, 31 ಎಕರೆ ಪ್ರದೇಶವನ್ನು ಒಳಗೊಂಡಿದೆ. ಒಟ್ಟು ಐದು ಹಂತಗಳಿದ್ದು, ಮೊದಲ ಮೂರು ಹಂತಗಳನ್ನು 'ದೀವಾನ್ ಎ ಆಮ್' (ಸಾಮಾನ್ಯ ಜನರಿಗೆ ಪ್ರವೇಶವಿರುವ ಸ್ಥಳ) ಎಂದೂ, ಮೇಲಿನ ಎರಡು ಹಂತಗಳನ್ನು 'ದೀವಾನ್ ಎ ಖಾಸ್' (ರಾಜ ಪರಿವಾರಕ್ಕಾಗಿ ಮೀಸಲಾದ ಸ್ಥಳ) ಎಂದೂ ಕರೆಯಲಾಗುತ್ತಿತ್ತು. ಈ ಎರಡರ ನಡುವೆ ಎತ್ತರದ ಗೋಡೆಯೊಂದಿದ್ದು, ರಾಣಿ ವಾಸದವರ ಪ್ರವೇಶಕ್ಕಾಗಿ ಎರಡು ಪ್ರತ್ಯೇಕ ಬಾಗಿಲುಗಳಿವೆ. ಗುಡ್ಡ ಪ್ರದೇಶದ ಪರಿಸರದ ಸೌಂದರ್ಯಕ್ಕೆ ಧಕ್ಕೆ ಬರದ ಹಾಗೆ ಇರುವ

